ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ107ಆರ್‌ಟಿಐ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ – ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ:22.09.2012

M.D. KPTCL

AGM(AR)

Dir.(Admn)

M(AR)

**ಸುತ್ತೋಲೆ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 6(3)ರಡಿ ಮಾಹಿತಿ ಕೋರಿಕೆ ಅರ್ಜಿಗಳ ವರ್ಗಾವಣೆ ಬಗ್ಗೆ.

ಉಲ್ಲೇಖ: ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ: ಕಮಾಆ 4632 ದೂರು 2011, ದಿ:04/06/2012.

– – –

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ: ಕಮಾಆ4632ದೂರು2011 (ಶ್ರೀ ಪರಮೇಶ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಡಾ॥ಅಂಬೇಡ್ಕರ್ ವೀದಿ, ಬೆಂಗಳೂರು)ನ್ನು ಇತ್ಯಾರ್ಥಪಡಿಸುತ್ತಾ, ಸಚಿವಾಲಯದ ಒಂದು ಇಲಾಖೆಯಿಂದ (ಆರ್ಥಿಕ ಇಲಾಖೆ) ಇನ್ನೊಂದು ಇಲಾಖೆಗೆ (ನಗರಾಭಿವೃದ್ಧಿ ಇಲಾಖೆ) ಮಾಹತಿ ಕೋರಿಕೆಯ ಅರ್ಜಿಯನ್ನು ವರ್ಗಾಯಿಸಲು ಸುಮಾರು 9 ದಿನಗಳು ಮತ್ತು ತದನಂತರ ನಿರ್ದೇಶನಾಲಯಕ್ಕೆ ವರ್ಗಾಯಿಸಲು ಸುಮಾರು 16 ದಿನ ತೆಗೆದುಕೊಂಡಿರುವುದು ಮತ್ತು ಮಾಹಿತಿ ಹಕ್ಕು ಕಾಯ್ದೆ ಕಲಂ 6(3)ರಲ್ಲಿ ನಿಗದಿಪಡಿಸಲಾಗಿರುವ ಗರಿಷ್ಠ 5 ದಿನಗಳ ಕಾಲಮಿತಿಯನ್ನು ಪಾಲಿಸಿಲ್ಲದಿರುವುದನ್ನು ಗಮನಿಸಿ, ಮಾಹಿತಿ ಹಕ್ಕು ಕಾಯ್ದೆ ಕಲಂ 6(3)ರಡಿ ನಿಗಧಿ ಪಡಿಸಲಾಗಿರುವ ಗರಿಷ್ಠ 5 ದಿನಗಳ ಕಾಲಮಿತಿಯನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಎಲ್ಲಾ ಸಚಿವಾಲಯದ ಇಲಾಖೆಗಳಿಗೆ ಸೂಕ್ತ ಸೂಚನೆಗಳನ್ನು ನೀಡಲು ಸರ್ಕಾರಕ್ಕೆ ಸೂಚಿಸಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ 2005ರ 6(1)ನೇ ಪ್ರಕರಣದಲ್ಲಿ ಯಾವುದೇ ಮಾಹಿತಿಯನ್ನು ಪಡೆಯಲು ಇಚ್ಛಿಸುವ ವ್ಯಕ್ತಿಯು ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಒ)ಗೆ ಕೋರಿಕೆಯನ್ನು ಸಲ್ಲಿಸತಕ್ಕದೆಂದು ಉಪಬಂಧ ಕಲ್ಪಸಿರುತ್ತದೆ. 6(3)ನೇ ಪ್ರಕರಣದಲ್ಲಿ ಮತ್ತೊಂದು ಸಾರ್ವಜನಿಕ ಪ್ರಾಧಿಕಾರವು ಹೊಂದಿರುವಂಥ ಮಾಹಿತಿಗಾಗಿ ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುವಲ್ಲಿ ಅಥವಾ ವಸ್ತು ವಿಷಯವು ಮತ್ತೊಂದು ಸಾರ್ವಜನಿಕ ಪ್ರಾಧಿಕಾರದ ಕಾರ್ಯನಿರ್ವಹಣೆಗೆ ನಿಕಟವಾಗಿ ಸಂಬಂಧಿಸಿರುವಲ್ಲಿ, ಯಾವ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಸಾರ್ವಜನಿಕ ಪ್ರಾಧಿಕಾರವು ಅರ್ಜಿಯನ್ನು ಸಂಬಂಧಪಟ್ಟ ಇತರ ಸಾರ್ವಜನಿಕ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕುದೆಂದು ಉಪಬಂಧ ಕಲ್ಪಿಸಿರುತ್ತದೆ.

6ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳ ಎಚ್ಚರದ ಅರ್ಥವಿವರಣೆಯು, ಅಧಿನಿಯಮವು ಮಾಹಿತಿ ಕೋರುವವನು 'ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರ'ದ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅರ್ಜಿಯನ್ನು ಬರೆಯುವಂಥೆ ಅಗತ್ಯಪಡಿಸುತ್ತದೆಂಬುದನ್ನು ಸೂಚಿಸುತ್ತದೆ. ಆದರೂ, ಸಾಮಾನ್ಯ ವ್ಯವಹಾರ ಪರಿಜ್ಞಾನವಿರುವ ವ್ಯಕ್ತಿಯು, ಆತನು/ಆಕೆಯು ಕೋರಿದ ಮಾಹಿತಿಯ ಭಾಗವು ವಾಸ್ತವವಾಗಿ ಯಾವುದೋ ಇನ್ನೊಂದು ಸಾರ್ವಜನಿಕ ಪ್ರಾಧಿಕಾರದಲ್ಲಿ ಇದ್ದರೂ, ಆತನು/ಆಕೆಯು ಮಾಹಿತಿಗಾಗಿ ಅರ್ಜಿಯನ್ನು ಬರೆದುಕೊಂಡಿರುವ ಪ್ರಾಧಿಕಾರದಲ್ಲಿ ಅದು ಲಭ್ಯವಾಗುವುದೆಂದು ನಂಬಿರಬಹುದಾದಂತಹ ಸಂದರ್ಭಗಳಿರಬಹುದು.

ಈ ವಿಷಯದಲ್ಲಿ ಉದ್ಭವಿಸಬಹುದಾಗಿರುವ ಕೆಲವು ಪರಿಸ್ಥಿತಿಗಳನ್ನು ಹಾಗೂ ಅಂಥ ಸಂದರ್ಭಗಳಲ್ಲಿ ಸಾರ್ವಜನಿಕ ಪ್ರಾಧಿಕಾರಗಳು ಕೈಗೊಳ್ಳಬೇಕಾದ ಕ್ರಮವನ್ನು ಈ ಕೆಳಗೆ ನೀಡಲಾಗಿದೆ:

ಒಬ್ಬ ವ್ಯಕ್ತಿಯು, ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಯಾವುದೋ ಇನ್ನೊಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಸಂಬಂಧಿಸಿರುವ ಯಾವುದೋ ಒಂದು ಮಾಹಿತಿಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಅಂಥ ಸಂದರ್ಭದಲ್ಲಿ, ಅರ್ಜಿಯನ್ನು ಸ್ವೀಕರಿಸುವ ಸಾರ್ವಜನಿಕ ಮಾಹಿತಿ ಅಧಿಕಾರಿಯು ಆ ಬಗ್ಗೆ ಅರ್ಜಿದಾರನಿಗೆ ಸೂಚನೆ ನೀಡಿ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಕ್ಕೆ ಆ ಅರ್ಜಿಯನ್ನು ವರ್ಗಾಯಿಸಬೇಕು.

ಒಬ್ಬ ವ್ಯಕ್ತಿಯು ಮಾಹಿತಿಗಾಗಿ ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಮಾಹಿತಿಯ ಒಂದು ಭಾಗ ಮಾತ್ರ ಸದರಿ ಸಾರ್ವಜನಿಕ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಮಾಹಿತಿಯ ಇನ್ನೊಂದು ಭಾಗವು ಯಾವುದೋ 'ಇನ್ನೊಂದು ಸಾರ್ವಜನಿಕ ಪ್ರಾಧಿಕಾರ'ಕ್ಕೆ ಸಂಬಂಧಿಸಿರುತ್ತದೆ. ಅಂಥ ಸಂದರ್ಭದಲ್ಲಿ, ಸಾರ್ವಜನಿಕ ಮಾಹಿತಿ ಅಧಿಕಾರಿಯು, ತನ್ನಲ್ಲಿ ಲಭ್ಯವಿರುವ ಮಾಹಿತಿಯನ್ನು ಒದಗಿಸಬೇಕು ಮತ್ತು ಅರ್ಜಿಯ ಒಂದು ಪ್ರತಿಯನ್ನು, ಅರ್ಜಿದಾರನಿಗೆ ಆ ಬಗ್ಗೆ ಸೂಚನೆ ನೀಡಿ, ಆ ಇನ್ನೊಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಕಳುಹಿಸಬೇಕು.

ಒಬ್ಬ ವ್ಯಕ್ತಿಯು ಮಾಹಿತಿಗಾಗಿ ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಅದರ ಒಂದು ಭಾಗವು ಆ ಸಾರ್ವಜನಿಕ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಮಾಹಿತಿಯ ಉಳಿದ ಭಾಗವು ಒಂದಕ್ಕಿಂತ ಹೆಚ್ಚು ಇತರ ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿಹೋಗಿರುತ್ತದೆ. ಅಂಥ ಸಂದರ್ಭದಲ್ಲಿ, ಅರ್ಜಿಯನ್ನು ಸ್ವೀಕರಿಸುವ ಸಾರ್ವಜನಿಕ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಬೇಕು ಮತ್ತು ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿಯನ್ನು ಪಡೆಯುವುದಕ್ಕಾಗಿ ಆ ಪ್ರಾಧಿಕಾರಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವಂತೆ ಅರ್ಜಿದಾರನಿಗೆ ಸಲಹೆ ಮಾಡಬೇಕು.

ಕೋರಲಾದ ಮಾಹಿತಿಯ ಯಾವುದೇ ಭಾಗವು ಅದರಲ್ಲಿ ಲಭ್ಯವಿರದಿದ್ದು ಅದು ಒಂದಕ್ಕಿಂತ ಹೆಚ್ಚು ಇತರ ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿಹೋಗಿದ್ದರೆ, ಸಾರ್ವಜನಿಕ ಮಾಹಿತಿ ಅಧಿಕಾರಿಯು, ಮಾಹಿತಿಯು ಸಾರ್ವಜನಿಕ ಪ್ರಾಧಿಕಾರದಲ್ಲಿ ಲಭ್ಯವಿರುವುದಿಲ್ಲವೆಂದು ಮತ್ತು ಅರ್ಜಿದಾರನು ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಿಗಳಿಂದ ಮಾಹಿತಿಯನ್ನು ಪಡೆಯುವುದಕ್ಕಾಗಿ ಆ ಪ್ರಾಧಿಕಾರಗಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕೆಂದು ಅರ್ಜಿದಾರನಿಗೆ ತಿಳಿಸಬೇಕು. ಅಧಿನಿಯಮವು, ಈಗಾಗಲೇ ಇರುವಂಥ ಮತ್ತು ಸಾರ್ವಜನಿಕ ಪ್ರಾಧಿಕಾರವು ಹೊಂದಿರುವಂಥ ಅಥವಾ ಸಾರ್ವಜನಿಕ ಪ್ರಾಧಿಕಾರಿದ ನಿಯಂತ್ರಣದಲ್ಲಿರುವಂಥ ಮಾಹಿತಿಯನ್ನು ಮಾತ್ರ ಒದಗಿಸುವಂತೆ ಅಗತ್ಯಪಡಿಸುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸೃಜಿಸುವುದು ಅಧಿನಿಯಮದ ವ್ಯಾಪ್ತಿಯನ್ನು ಮೀರಿದಂತಾಗುತ್ತದೆ.

ಆದ್ದರಿಂದ ಸೆಕ್ಷನ್ 6(3)ರಡಿ ಒಬ್ಬ ಅರ್ಜಿದಾರನು ಮತ್ತೊಂದು ಸಾರ್ವಜನಿಕ ಪ್ರಾಧಿಕಾರ ಹೊಂದಿರುವಂತಹ ಮಾಹಿತಿಗಾಗಿ ಅರ್ಜಿ ಸಲ್ಲಿಸಿದ್ದರೆ, ಯಾವ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆಯೋ, ಆ ಸಾರ್ವಜನಿಕ ಪ್ರಾಧಿಕಾರ, ಅರ್ಜಿಯನ್ನು ಮತ್ತೊಂದು ಪ್ರಾಧಿಕಾರಕ್ಕೆ 5 ದಿನಗಳೊಳಗಾಗಿ ವರ್ಗಾಯಿಸತಕ್ಕದ್ದು ಮತ್ತು ವರ್ಗಾವಣೆಯ ಮಾಹಿತಿಯನ್ನು ಅರ್ಜಿದಾರನಿಗೆ 5 ದಿನಗಳೊಳಗೆ ಕೊಡತಕ್ಕದ್ದು.

ಮೇಲಿನ ಸೂಚನೆಗಳನ್ನು ಪಾಲಿಸುವಂತೆ ತಮ್ಮ ಆಡಳಿತಾಧೀನದ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ, ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದೆ.

ಲ. ವೆಂಕಟಗಿರಿಯಪ್ಪ 22/9/12

(ಲ.ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ – ಜನಸ್ಪಂದನ – ಮಾಹಿತಿ ಹಕ್ಕು)

**ಇವರಿಗೆ.**

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3.ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4.ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

**ಪ್ರತಿ:– ಮಾಹಿತಿಗಾಗಿ**

1.ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ
2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಇ – ಜನಸ್ಪಂದನ)
3.ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಆಸುಇ (ಆಸು – ಜನಸ್ಪಂದನ)
4.ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹು ಮಹಡಿ ಕಟ್ಟಡ.
5.ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು